ಅಸಲು ದಾವಾಃ - 242/2021 ಡಿ.ಡಬ್ಲ್ಯೂ- 2

ದಿನಾಂಕಃ 18.02.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ.ಜಿ ಎಸ್ ಆರ್ ವಕೀಲರಿಂದ

ನನ್ನ ಗಂಡನ ತಂದೆ-ತಾಯಿಯ ಹೆಸರು ಎಂದರೆ ಕರಿಯಪ್ಪ ಮತ್ತು ಕರಿಯಮ್ಮ ಎಂದು ನುಡಿಯುತ್ತಾರೆ. ಕರಿಯಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದರೆ ಮಂಜಪ್ಪ, ತಿಮ್ಮಪ್ಪ ಮತ್ತು ಹನುಮಂತಪ್ಪ ಎಂದು ನುಡಿಯುತ್ತಾರೆ. ನನ್ನ ಮದುವೆ ಯಾವಾಗ ಆಗಿರುತ್ತದೆ ಎಂದರೆ ನೆನಪಿಲ್ಲ. ನನ್ನ ಗಂಡ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ದಿಃ 28.10.2016 ಎಂದು ನುಡಿಯುತ್ತಾರೆ. ನಾನು ಏನು ಕೆಲಸ ಮಾಡುತ್ತೇನೆ ಎಂದರೆ ಕೂಲಿ ಕೆಲಸ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳು ನನಗೆ ಮದುವೆಯಾಗುವ ಪೂರ್ವದಲ್ಲಿಯೇ ಗಂಡನ ಮನೆಯವರಿಗೆ ಇತ್ತು ಎಂದರೆ ಸರಿ ಮುಂದುವರೆದು ಸಾಕ್ಷಿಯು ಅವರು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮದುವೆಯಾಗುವ ಪೂರ್ವದಲ್ಲಿಯೇ ಮಂಜಪ್ಪ, ತಿಮ್ಮಪ್ಪ ಹಾಗೂ ಹನುಮಂತಪ್ಪರವರು ದಾವಾ ಆಸ್ತಿಯನ್ನು ಅನುಭವಿಸುತ್ತಿದ್ದಾರೆ ಎಂದರೆ ತಿಮ್ಮಪ್ಪ ಮತ್ತು ಹನುಮಂತಪ್ಪರವರು ಖರೀದಿ ಮಾಡಿದ ಜಮೀನುಗಳನ್ನು ಅನುಭವಿಸುತ್ತಿದ್ದರು ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳ ಸರ್ವೆ ನಂಬರ್ ಗಳು ಎಷ್ಟು ಎಂದರೆ ಸರ್ವೆ ನಂ.45 ರಲ್ಲಿ 2 ಎಕರೆ 35 ಗುಂಟೆ, ಸರ್ವೆ ನಂ.46 ರಲ್ಲಿ 2 ಎಕರೆ 28 ಗುಂಟೆಯಲ್ಲಿ ಪ್ರತಿವಾದಿ 1 ಹಾಗೂ ಹನುಮಂತಪ್ಪರವರ ಹೆಸರಿನಲ್ಲಿ ಎಂದು ನುಡಿ ಯುತ್ತಾರೆ. ದಾವಾ ಐಟಂ ನಂಬರ್ 1 ರ ಆಸ್ತಿಯಲ್ಲಿ ಮಂಜಪ್ಪರವರು ತೀರಿಕೊಂಡ ನಂತರ ಯಾರ್ಯಾರು ಎಷ್ಟೆಷ್ಟು ಎಕರೆಯಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಮಂಜಪ್ಪ, ತಿಮ್ಮಪ್ಪ ಹಾಗೂ ಹನುಮಂತಪ್ಪ ರವರು 3 ಭಾಗ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂಬರ್ 2 ರ ಆಸ್ತಿಯಲ್ಲಿ ಮಂಜಪ್ಪರವರು ತೀರಿಕೊಂಡ ನಂತರ ಯಾರ್ಯಾರು ಎಷ್ಟೆಷ್ಟು ಎಕರೆಯಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ತಿಮ್ಮಪ್ಪ ಹಾಗೂ ಹನುಮಂತಪ್ಪ ರವರು ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ರಲ್ಲಿ ಹನುಮಂತಪ್ಪ ಹಾಗೂ 1 ನೇ

ಪ್ರತಿವಾದಿ ಮಾತ್ರ ಸಾಗುವಳಿ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಕರಾರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ನಾನೇ.

ಸರ್ವೆ ನಂ.46/2 ರ 2 ಎಕರೆ 28 ಗುಂಟೆಯಲ್ಲಿ ವಾದಿ ಚಂದ್ರಮ್ಮರವರು 1 ಎಕರೆ, 1 ನೇ ಪ್ರತಿವಾದಿ 1 ಎಕರೆ ಹಾಗೂ ನಾನು 28 ಗುಂಟೆಯಲ್ಲಿ ಸಾಗುವಳಿ ಮಾಡುತ್ತಿದ್ದೇವೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇವೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ವಾದಿಯು ಉದ್ದಪಟ್ಟಿಯಲ್ಲಿ 1 ಎಕರೆ ಬಿಡಿಸಿಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರಲ್ಲಿಯೂ ಸಹ ವಾದಿಗಳು 1 ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

2001 ರಲ್ಲಿ ದಾವಾ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳೋಣ ಎಂದು ವಾದಿಗಳು ನನ್ನನ್ನು 2021 ರಲ್ಲಿ ಕೇಳಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಕರೆದು ನನಗೆ ಮೋಸಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯ ಪೂರ್ವಿಕರೇ ದಾವಾ ಐಟಂ ನಂಬರ್ 2 ರ ಆಸ್ತಿಯನ್ನು ಖರೀದಿ ಮಾಡಿ ತಿಮ್ಮಪ್ಪ ಹಾಗೂ ಹನುಮಂತಪ್ಪರವರ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತಿಮ್ಮಪ್ಪ ಹಾಗೂ ಹನುಮಂತಪ್ಪರವರು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ತಿಮ್ಮಪ್ಪ ಹಾಗೂ ಹನುಮಂತಪ್ಪ ದಾವಾ ಐಟಂ ನಂ.2 ನ್ನು ಯಾರಿಂದ ಖರೀದಿ ಮಾಡಿರುತ್ತಾರೆ ಎಂದರೆ ಕರಿಯಮ್ಮ ರವರಿಂದ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ನ್ನು ಖರೀದಿ ಮಾಡುವ ಕಾಲದಲ್ಲಿ ನನ್ನ ಗಂಡ ಹಾಗೂ 1 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯು ಸಂಬಳ ಇದ್ದು ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರಗಳನ್ನು ನನಗೆ ಯಾರು ಹೇಳಿರುತ್ತಾರೆ ಎಂದರೆ ನನ್ನ ಗಂಡ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ